ವಿ. ಹಮೀದ್, ವಿಟ್ಲ
ಪೊಲೀಸರು ರಾತ್ರಿ ಸಮಯದಲ್ಲೇ ಪೀಪಿ ಊದಿಕೊಂಡು ಯಾಕೆ ತಿರುಗಾಡುತ್ತಾರೆ ಸಾರ್?



ಅಮಲೇರಿದ ಚಾಲಕರು ತಮಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಿಕೊಳ್ಳಲು ಮುನ್ನೆಚ್ಚರಿಕೆ ಕ್ರಮ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
ನಮಗೆ ಸೋಲಾದಾಗ ಮಾತ್ರ ತಲೆ ತಗ್ಗಿಸಬೇಕೆ?
ಗಿಡ್ಡ ಬಾಗಿಲುವಾಡ, ದೊಡ್ಡ ಸಾಧಕರನ್ನು ಕಂಡಾಗಲೂ ತಗ್ಗಿಸಬಹುದು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಇಲ್ಲೊಬ್ಬರ ಮನೆಯಲ್ಲಿ ಸುಮಾರು ದೇವರ ಮೂರ್ತಿಗಳಿವೆ. ಹೀಗಾದರೆ ಗುಡಿಗಳು ಖಾಲಿಖಾಲಿ ಅನಿಸಲ್ವಾ?
ಹ್ಞ. ಪ್ರತಿ ಮನೆಯಲ್ಲಿ ಅಡುಗೆ ಮಾಡಿದರೂ ಹೋಟೆಲ್ ಭರ್ತಿಯಾಗುವುದಲ್ಲ!

ರಾಜೇಶ್ವರಿ, ಪುತ್ತೂರು
ಬೆಕ್ಕಿಗೂ, ಹಾಲಿಗೂ ಯಾವ ರೀತಿಯ ನಂಟು ರಾಮ್‌ಜೀ?



ಮನುಷ್ಯನಿಗೂ, ಆಲ್ಕೋಹಾಲಿಗೂ ಇರುವಂಥ ಅಡ್ಡಪರಿಣಾಮದ ನಂಟೇ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ರೋಗಿಗಳಿಗೆ ಪಂಚಪಕ್ವಾನ್ನಗಳು ಏಕೆ ಕಹಿ ಅನಿಸುತ್ತವೆ?
ಒಳಸೇರುತ್ತಿದ್ದಂತೆಯೇ ಪಂಚ್ ಕೊಡುವುದರಿಂದ.

ಅಮರಯ್ಯಾ ಪತ್ರಿಮಠ, ಸುರಪುರ
ಜ್ಞಾನಿಗೂ, ವಿಜ್ಞಾನಿಗೂ ವ್ಯತ್ಯಾಸವೇನು?
ಇರುವುದನ್ನು ಅರಿತವನು ಜ್ಞಾನಿ; ಇಲ್ಲದ್ದನ್ನು ಅರಸುವವನು ವಿಜ್ಞಾನಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಎಲ್ಲರೂ ಸತ್ಯವನ್ನೇ ಮಾತನಾಡಿದರೆ ಹೇಗಿರುತ್ತೆ ಸಾರ್?
ಸೃಜನಶೀಲತೆ, ಅನ್ವೇಷಣೆಯ ಕೌತುಕ ಎರಡೂ ಸತ್ತುಹೋಗುತ್ತವೆ.

ಗಂಜಾಂ ನಾಗರಾಜ, ಮೈಸೂರು
ಮಂತ್ರಕ್ಕೆ ಮಾವಿನಕಾಯಿ ಉದುರೋಲ್ಲ ಅಂತಾರಲ್ಲಾ, ಹಾಗಾದರೆ ಏನು ಉದುರಬಹುದು?
ದಕ್ಷಿಣೆ, ಉಪಾಯನದಾನ, ಮೆಚ್ಚುಗೆ, ಎಂಜಲು...

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಹೂವು ತಾನಾಗಿ ಅರಳುವುದಕ್ಕೂ, ಬಲವಂತವಾಗಿ ಅರಳಿಸುವುದಕ್ಕೂ ಇರುವ ಅಂತರವೇನು?
ಮಾರುಹೋಗುವವರಿಗೆ ಇದು ಚೆನ್ನ; ಮಾರಲು ಒಯ್ಯುವವರಿಗೆ ಅದು ಚೆನ್ನ.

ಶ್ರೀನಿವಾಸ ಜಿ. ಪದಕಿ, ಮುಂಬಯಿ
'ನಿನ್ನ ಕಣ್ಣ ಕನ್ನಡಿಯಲ್ಲಿ ಕಂಡೆ ನನ್ನ ರೂಪ' ಎಂದ ರೂಪಸಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?
ಅವಳಿಗೆ ಡ್ರೆಸಿಂಗ್ ಮಿರರ್‌ನ ತುರ್ತು ಅವಶ್ಯಕತೆಯಿದೆ ಎಂದು.

ಬೂಕನಕೆರೆ ವಿಜೇಂದ್ರ, ಮೈಸೂರು
ಗಂಡಸರಿಗಿಂತ ಹೆಂಗಸರಿಗೆ ಅನುಮಾನ ಹೆಚ್ಚು. ಏಕೆ?
ಏಕೆಂದರೆ ಗಂಡಸರು ಅನುಮಾನಾಸ್ಪದವಾದ ಕೆಲಸಗಳನ್ನು ಮಾಡುವುದು ಹೆಚ್ಚು.

ಹರಿತಸ, ಬೆಂಗಳೂರು
ಪ್ರಾಣಿಗಳಂತೆ ಮನುಷ್ಯರೂ ನಾಲ್ಕು ಕಾಲಿನಲ್ಲಿ ನಡೆದಾಡಿದ್ದರೆ?
ಕೈಕಾಲಿಗೆ ಚಕ್ರ, ಕಿವಿಗೆ ಆಕ್ಸಿಲೇಟರ್, ಬ್ರೇಕ್ ಕೇಬಲ್, ಬೆನ್ನಿಗೆ ಪೆಟ್ರೋಲ್ ಟ್ಯಾಂಕ್ ಸಿಕ್ಕಿಸಿ 'ನರವಾಹನ' ಮಾಡಬಹುದಿತ್ತು.

ಮಹಾಲಿಂಗಪ್ಪ ಗೋರಬಾಳ, ಮೋಕ
ದೆವ್ವ, ಭೂತ ಇದೆ ಅನ್ನುತ್ತಾರೆ. ನಿಜವೆ?
ಭವಿಷ್ಯ ಹೇಳುವ ಭೂತಗಳು, ಸುಳ್ಳು ಸುದ್ದಿ ಹರಡುವ ದೆವ್ವಗಳು ಟೀವಿಯಲ್ಲೇ ಇವೆಯಲ್ಲ.

## ಬಹುಮಾನಿತ ಪ್ರಶ್ನೆ

ಎನ್.ಐ. ದವಡಿ, ಹಳ್ಳದಕೇರಿ
ಮರುಭೂಮಿಯಲ್ಲಿ ಇರುವವನು ನದಿ, ಸಮುದ್ರಗಳನ್ನು ಹೇಗೆ ವರ್ಣಿಸುವನು?
ನಾವು ದೇವರನ್ನು ವರ್ಣಿಸಿದಂತೆಯೇ.

ನರಸಿಂಹ ಪೈ, ಕಾಸರಕೋಡ
ಪ್ರತಿ ವರ್ಷವೂ ಹೊಸ ವರ್ಷ ಏಕೆ ಬರುತ್ತದೆ?
ನಾವು 365ರ ಮೇಲೆ ದಿನಗಳನ್ನು ಎಣಿಸುವುದನ್ನು ಕಲಿತಿಲ್ಲವಾದ್ದರಿಂದ.

ತಲಕಾಡು ಶ್ರೀನಿಧಿ, ಬೆಂಗಳೂರು
ಚುನಾವಣೆಗೆ ನಿಂತಿದ್ದಾರೆ ಅಂತಾರೆ. ಯಾಕೆ, ಕೂತ್ಕೊಳ್ಳಕ್ಕಾಗಲ್ವಾ?
ಜನಗಳಿಗೆ ಕಾಣಿಸಬೇಕಲ್ಲ; ಅಲ್ಲದೆ ನಂತರದ್ದೆಲ್ಲ ತಿನ್ನಕ್ಕೇಂತ ಕೂತ್ಕೊಳ್ಳೋದೇ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ಕನ್ನಡ ಪ್ರೀತಿಗೂ ಕನ್ನಡಕ ಪ್ರೀತಿಗೂ ಏನು ವ್ಯತ್ಯಾಸ?



ಒಂದು 'ಪುಟ'ವಿಟ್ಟ ಚಿನ್ನ; ಇನ್ನೊಂದು 'ಮುನ್ನೋಟ'ದ ದರ್ಪಣ.

ಪ್ರಕಾಶ, ಶಿವಮೊಗ್ಗ
ತಾಯಿಗೂ, ನಾಯಿಗೂ ಇರೋ ವ್ಯತ್ಯಾಸ ತಿಳಿಸಿ?
ತಾಯಿಯ ಮಗ ಎನಿಸಿಕೊಳ್ಳಲು ಹೆಮ್ಮೆ ಇರುತ್ತದೆ.

ಜಾನಿ, ಬೆಂಗಳೂರು
ಟ್ವಿಟರ್ ಬಿಟ್ಟು ಈಗ ವೈರಸ್ಸೇ ವೈರಲ್ ಆಗ್ಹೋಯ್ತಲ್ಲಾ ರಾಮಣ್ಣಾ...?
ವಾಟ್ಸ್ ಆ್ಯಪ್ ಅಂದ್ಕೊಂಡು ಫೇಸ್ ಟು ಫೇಸ್ ಬಂದು ಲಿಂಕ್ಡಿನ್ ಆಗಿದ್ದೇ ಕಾರಣವಂತೆ.

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್